MediaTAR
...Tracking, Analysis & Reportage

| | | | |
|---|---|---|---|
| **PUBLICATION** | Vijayavani | **DATE** | 11.02.2019 |
| **EDITION** | Bangalore | **PAGE NO** | 03 |
| **HEADLINE** | Ultimate aim of Education is not Employment, but Empowerment & Enlightenment, says Honourable Vice President of India, M. Venkaiah Naidu | | |

# ವಿಶ್ವಗುರು ಸ್ಥಾನ ಮರಳಿ ಪಡೆಯಲು ಶ್ರಮಿಸಿ

## ಶಿಕ್ಷಣ ಸಂಸ್ಥೆಗಳಿಗೆ ವೆಂಕಯ್ಯ ನಾಯ್ಡು ಸಲಹೆ | ಸಿಎಂಆರ್ ನೂತನ ಕ್ಯಾಂಪಸ್ ಉದ್ಘಾಟನೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಜ್ಞಾನ ಮತ್ತು ಶಿಕ್ಷಣದಲ್ಲಿ ಭಾರತ ವಿಶ್ವಗುರು ಎಂಬ ಸ್ಥಾನ ಪಡೆದಿತ್ತು. ಇದನ್ನು ಮರಳಿ ಗಳಿಸಲು ದೇಶದ ಎಲ್ಲ ಶಿಕ್ಷಣ ಸಂಸ್ಥೆಗಳೂ ಶ್ರಮಿಸಬೇಕೆಂದು ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಕರೆ ನೀಡಿದ್ದಾರೆ.

» ವಿವಿ ಏಳಿಗೆಗೆ ಶ್ರಮಿಸಿದ ಶಿಕ್ಷಕರಿಗೆ ಸನ್ಮಾನ

ಹೆಣ್ಣೂರು- ಬಾಗಲೂರು ರಸ್ತೆಯಲ್ಲಿ ಭಾನುವಾರ ಸಿಎಂಆರ್ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಉದ್ಘಾಟಿಸಿ ಮಾತನಾಡಿದರು.

ಭಾರತದ ಪ್ರಾಚೀನ ಶಿಕ್ಷಣ ವ್ಯವಸ್ಥೆ ಶ್ರೇಷ್ಠವಾಗಿತ್ತು. ವೇದ-ಉಪನಿಷತ್ ಬೋಧನೆ ಮೇರು ವ್ಯಕ್ತಿತ್ವ ನಿರ್ಮಾಣಕ್ಕೆ ಪೂರಕವಾಗಿತ್ತು. ವಿಶ್ವದ ಮೊದಲ ವಿವಿ ತಕ್ಷಶಿಲಾ 65 ಕೋರ್ಸ್ ಪರಿಚಯಿಸಿತ್ತು. ಆ ಕಾಲದಲ್ಲೇ 10 ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಅಲ್ಲಿ ವ್ಯಾಸಂಗ ಮಾಡುತ್ತಿದ್ದರು. ನಳಂದ ವಿಶ್ವವಿದ್ಯಾಲಯ ಬೃಹತ್ ಗ್ರಂಥಾಲಯವನ್ನೇ ಹೊಂದಿತ್ತು. ಇದು ನಮ್ಮ ನೆಲದ ಶಿಕ್ಷಣದ ಮೇರು ಆದರ್ಶ ಎಂದರು.

ಜಾಗತಿಕ ಮಟ್ಟದಲ್ಲಿ ಹೆಚ್ಚು ವಿದ್ಯಾಸಂಸ್ಥೆಗಳನ್ನು ಹೊಂದಿರುವ ದೇಶ ಭಾರತ. ಆದರೆ, ನಾವಿನ್ನೂ ಮೆಕಾಲೆ ಶಿಕ್ಷಣ ಪದ್ಧತಿಯಲ್ಲೇ ಇದ್ದೇವೆ. ಗುಣಮಟ್ಟ ಶಿಕ್ಷಣ ನೀಡುವ ಮೂಲಕ ನಮ್ಮ ದೇಶಕ್ಕಿದ್ದ ವಿಶ್ವಗುರು ಸ್ಥಾನವನ್ನು ಮರಳಿ ತರಬೇಕಿದೆ ಎಂದರು. ನಮ್ಮಲ್ಲಿ ಪ್ರತಿಭೆಗಳಿಗೆ ಕೊರತೆ ಇಲ್ಲ. ಆದರೆ, ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹ ಮತ್ತು ಕೌಶಲ ನೀಡುವಲ್ಲಿ ವಿವಿಗಳು ಸೋತಿವೆ ಎಂದು ವಿಷಾದಿಸಿದರು.

ಶಿಕ್ಷಣರಂಗವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಹೆಚ್ಚಿನ ಬಂಡವಾಳ ಹೂಡಿಕೆ ಮತ್ತು ಕಾಳಜಿ ವಹಿಸಲು ಕೇಂದ್ರ ಸರ್ಕಾರ ನೂತನವಾಗಿ ಏಳು ಐಐಟಿ, ಏಳು ಐಐಎಂ, ಎರಡು ಐಐಎಸ್‌ಇಆರ್, 11 ಐಐಐಟಿ ಕೇಂದ್ರ ಸ್ಥಾಪಿಸಲು ಮುಂದಾಗಿದೆ ಎಂದರು. ಸರ್ಕಾರದೊಂದಿಗೆ ಖಾಸಗಿ ಕ್ಷೇತ್ರದ ಶಿಕ್ಷಣ ಸಂಸ್ಥೆಗಳೂ ಸಹಯೋಗ ನೀಡಬೇಕು. ವಿದ್ಯಾರ್ಥಿಗಳಿಗೆ ಶೇ.50 ಪಠ್ಯ ಮತ್ತು ಶೇ.50 ದೈಹಿಕ ಶಿಕ್ಷಣದ ಅವಶ್ಯಕತೆ ಇದೆ ಎಂದು ನಾಯ್ಡು ಸಲಹೆ ನೀಡಿದರು.

ನ್ಯಾಷನಲ್ ಪಬ್ಲಿಕ್ ಶಾಲೆ ಅಧ್ಯಕ್ಷ ಡಾ. ಕೆ.ಪಿ. ಗೋಪಾಲಕೃಷ್ಣ ಮಾತನಾಡಿ, ನಮ್ಮ ದೇಶದಲ್ಲಿ ಪ್ರತಿಭಾನ್ವಿತರಿಗೆ ಹೆಚ್ಚಿನ ಮಾನ್ಯತೆ ನೀಡುತ್ತಿಲ್ಲ. ಇದರಿಂದ ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ವಿದೇಶಕ್ಕೆ ಹಾರುತ್ತಿದ್ದಾರೆ ಎಂದರು.

ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯ ಕೆ.ಸಿ. ರಾಮಮೂರ್ತಿ, ಸಿಎಂಆರ್ ವಿವಿ ಕುಲಾಧಿಪತಿ ಡಾ. ಸಬಿತಾ ರಾಮಮೂರ್ತಿ ಮತ್ತಿತರರು ಉಪಸ್ಥಿತರಿದ್ದರು. ಸಿಎಂಆರ್ ಆರಂಭದಿಂದ ಶ್ರಮಿಸಿದ ಶಿಕ್ಷಕರನ್ನು ಸನ್ಮಾನಿಸಲಾಯಿತು.



ಸಿಎಂಆರ್ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್‌ನ್ನು ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಉದ್ಘಾಟಿಸಿದರು. ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಸಿ. ರಾಮಮೂರ್ತಿ ಮತ್ತಿತರರಿದ್ದರು.

### ನಾಯ್ಡು ಕನ್ನಡ ಪ್ರೇಮ

ನಮಸ್ಕಾರ ಎಲ್ಲರಿಗೂ... ನನಗೆ ನಾಲ್ಕು ದಶಕಗಳಿಂದ ಕನ್ನಡ ಕರಗತವಾಗಿದೆ ಎಂದು ವೆಂಕಯ್ಯ ನಾಯ್ಡು ಕನ್ನಡದಲ್ಲೇ ಭಾಷಣ ಆರಂಭಿಸಿ ಎಲ್ಲರನ್ನೂ ಅಚ್ಚರಿಗೊಳಿಸಿದರು. ನಾನು ಬೆಂಗಳೂರಿನಲ್ಲಿದ್ದಾಗ ವಿವಿಧ ಹೋಟೆಲ್‌ಗಳಲ್ಲಿ ಬಿಸಿ ಇಡ್ಲಿ ತಿನ್ನುತ್ತಿದ್ದೆ. ಆದರೆ, ಉಪರಾಷ್ಟ್ರಪತಿಯಾದ ಮೇಲೆ ಅದೆಲ್ಲ ಕಷ್ಟವಾಗಿದೆ ಎಂದು ಬೆಂಗಳೂರಿನ ನೆನಪುಗಳನ್ನು ಮೆಲುಕು ಹಾಕಿದರು.

**ಪಾಶ್ಚಾತ್ಯ ಸಂಸ್ಕೃತಿ, ಆಹಾರಗಳಿಗೆ ಮಾರು ಹೋಗಬೇಡಿ. ನಮ್ಮ ಭಾರತೀಯ ಆಹಾರ ಪದ್ಧತಿಯೇ ಶ್ರೇಷ್ಠ. ಪಾಲಕರು, ಗುರು, ಜನ್ಮಭೂಮಿ, ಮಾತೃಭಾಷೆ, ದೇಶ-ಈ ಐದು ಅಂಶಗಳನ್ನು ವಿದ್ಯಾರ್ಥಿಗಳು ಎಂದಿಗೂ ಮರೆಯಬಾರದು.**

| ವೆಂಕಯ್ಯ ನಾಯ್ಡು ಉಪರಾಷ್ಟ್ರಪತಿ